


ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಏಳು ಹೆಜ್ಜೆ'ಗಳ ಏಳುಬೀಳು

**ಕ**ನ್ನಡದಲ್ಲಿ 'ಏಳು' ನಾಮಪದವೂ ಹೌದು, ಕ್ರಿಯಾಪದವೂ ಹೌದು. ನಾಮಪದವಾದರೆ ಅದೊಂದು ಸಂಖ್ಯಾವಾಚಕ ಪದ. ಕ್ರಿಯಾಪದವಾದರೆ ಅದು ಯಾರನ್ನಾದರೂ ಎಚ್ಚರಿಸಲು ಬಳಸುವ ಪದ. ದಿನನಿತ್ಯದ ವ್ಯವಹಾರದಲ್ಲಿ ಎಲ್ಲ ಸಂಖ್ಯೆಗಳಂತೆ 'ಏಳು' ಒಂದು ಸಂಖ್ಯೆ. ಏಳನೆ ಸಂಖ್ಯೆಯ ವಿಶೇಷವೆಂದರೆ ಸಂಗೀತದಲ್ಲಿ ಸ್ವರಗಳು ಏಳು, ವ್ಯಾಕರಣದಲ್ಲಿ ವಿಭಕ್ತಿಗಳು ಏಳು, ವಾರದಲ್ಲಿ ದಿನಗಳು ಏಳು, ಸಮುದ್ರಗಳು ಏಳು, ಬೆಳಕಿನಲ್ಲಿರುವ ಬಣ್ಣಗಳು ಏಳು, ಆಗಸದ ಸಪ್ತರ್ಷಿಮಂಡಲದಲ್ಲಿರುವ ನಕ್ಷತ್ರಗಳು ಏಳು. ವಯಸ್ಸಿಗೆ ಸಹಜವಾದ ಬಣ್ಣ ಬಣ್ಣದ ಹೊಂಗನಸುಗಳನ್ನು ಕಾಣುವ ಯುವಕಯುವತಿಯರು ಹಿಂದೂಗಳಾಗಿದ್ದರೆ ಮದುವೆ ಮಂಟಪದಲ್ಲಿ ತುಳಿಯುವ ಹೆಜ್ಜೆಗಳೂ ಏಳು (ಸಪ್ತಪದಿ). ಇಷ್ಟೆಲ್ಲಾ ಒಳ್ಳೆಯ ಹಿನ್ನೆಲೆಯುಳ್ಳ ಏಳರ ಸಂಖ್ಯೆ 'ಏಳು-ಬೀಳು' ಎಂದು ಅವಜ್ಞೆಗೆ ಗುರಿಯಾಗದೇ ಇಲ್ಲ.

ಏಳರ ಸಂಖ್ಯೆಯ ವಿಚಾರ ಏನೇ ಇರಲಿ, ಮದುವೆ ಮಂಟಪದಲ್ಲಿ 'ಏಳು ಹೆಜ್ಜೆ'ಗಳನ್ನು ತುಳಿಯುವ ದಂಪತಿಗಳ ವಿಚಾರಕ್ಕೆ ಬರೋಣ. ಮಂಗಳ ವಾದ್ಯಗಳ ಸುಮಧುರ ನಿನಾದದ ಮಧ್ಯೆ ಮಾಂಗಲ್ಯ ಧಾರಣೆಯ ನಂತರ ಸತಿಪತಿಗಳು ಪರಸ್ಪರ ಕೈಹಿಡಿದು ಅಗ್ನಿಕುಂಡದ ಸುತ್ತ ಅಥವಾ ಅಕ್ಕಿಯ ಏಳು ರಾಶಿಗಳ ಮೇಲೆ ಶಾಸ್ತ್ರೋಕ್ತವಾಗಿ 'ಇಷ



ಏಕಪದೀ, ಊರ್ಜೇ ದ್ವಿಪದೀ..' ಎಂದು ಮಂತ್ರೋಚ್ಚಾರಣೆ ಮಾಡುತ್ತಾ ಇಡುವ ಏಳು ಹೆಜ್ಜೆಗಳೇ 'ಸಪ್ತಪದಿ'. ಸಂಸ್ಕೃತದಲ್ಲಿರುವ ಈ ಮಂತ್ರಗಳ ಅರ್ಥವನ್ನು ತಿಳಿದುಕೊಳ್ಳುವ ವ್ಯವಧಾನ ವಧೂ-ವರರಿಗಾಗಲೀ ತಿಳಿಸಿಕೊಡುವ ಕಾತುರತೆ ಪುರೋಹಿತರಿಗಾಗಲೀ ಆಗ ಇರುವುದಿಲ್ಲ. ಗುರುಹಿರಿಯರ, ಬಂಧುಬಾಂಧವರ ಸಮ್ಮುಖದಲ್ಲಿ ಸಪ್ತಪದಿಯನ್ನು ತುಳಿಯುವ ಸಂಪ್ರದಾಯದಲ್ಲಿರುವ ಮೂಲ ಆಶಯ ನವದಂಪತಿಗಳು ಜೀವನಪರ್ಯಂತ ಬಾಳಸಂಗಾತಿಗಳಾಗಿ ಜೊತೆಗೂಡಿ ನಡೆಯುವ ಸತ್ಯಸಂಕಲ್ಪ. ವಧೂ-ವರರು ಈ ಮಂತ್ರೋಚ್ಚಾರಣೆಯ ಮೂಲಕ ತಮ್ಮ ವೈಯಕ್ತಿಕ ಸುಖವನ್ನಷ್ಟೇ ಹಾರೈಸದೆ ತಾವು ಬದುಕಿ ಬಾಳಬೇಕಾದ ಸಮಾಜದ ಸುಖವನ್ನೂ ಹಾರೈಸಿ ದೇವರನ್ನು ಪ್ರಾರ್ಥಿಸುತ್ತಾರೆ. ಬಾಳಿನುದ್ದಕ್ಕೂ ಬರುವ ಸುಖ-ದುಃಖಗಳನ್ನು ಪರಸ್ಪರರು ಹಂಚಿಕೊಂಡು ಜೊತೆಗೂಡಿ ನಡೆಯುತ್ತೇವೆ ಎಂದು ಗುರುಹಿರಿಯರ ಸಮ್ಮುಖದಲ್ಲಿ ಈ ಧಾರ್ಮಿಕ ವಿಧಿಯ ಮೂಲಕ ಪ್ರಮಾಣ ಮಾಡುತ್ತಾರೆ.

ಬಾಳಿನ ದಾರಿಯು ಸುಗಮವಾಗಿ ಸಾಗುವ ಹೈಟೆಕ್ ಹೆದ್ದಾರಿಯೇನಲ್ಲ. ಅಲ್ಲಿ ನಾನಾ ತಿರುವುಗಳು, ಹಳ್ಳ-ಕೊಳ್ಳಗಳು, ತಗ್ಗು-ತಿಟ್ಟುಗಳು, ಅನೂಹ್ಯ ಕಲ್ಲು-ಮುಳ್ಳುಗಳು ಹೇರಳವಾಗಿ ಎದುರಾಗುತ್ತವೆ. ಆ ದಾರಿಯಲ್ಲಿ ಬೆಳದಿಂಗಳೂ ಇದೆ, ಬಿಸಿಲೂ ಇದೆ. ಬೆಳದಿಂಗಳು ಬಿಸಿಲಾಗಿ ಕಾಡುವುದೂ ಉಂಟು; ಬಿಸಿಲಿನ ಉರಿ ತಗ್ಗಿ ಆಹ್ಲಾದಕರವಾದ ಚಂದ್ರನ ತಂಪೂ ಉಂಟು. ಭಾರತೀಯರ ಬದುಕಿನಲ್ಲಿ ಮದುವೆಯೆಂಬುದು ಇಬ್ಬರು ವ್ಯಕ್ತಿಗಳಿಗೆ ಸಂಬಂಧಿಸಿದ ಖಾಸಗಿ ಸಂಗತಿಯಲ್ಲ. ಅದು ವೈಯಕ್ತಿಕ ಸುಖಕ್ಕಾಗಿ ಇರುವುದಾದರೂ, ಅದರ ಜೊತೆಗೆ ಕೌಟುಂಬಿಕ ಹಿತ, ಸಾಮಾಜಿಕ ಹೊಣೆಗಾರಿಕೆಗಳು ಸಹ ಅಡಕವಾಗಿರುತ್ತವೆ. ಹೀಗಾಗಿ ಅದು ಎರಡು ವ್ಯಕ್ತಿಗಳ ನಡುವಣ ವ್ಯಾವಹಾರಿಕ ಒಪ್ಪಂದವಾಗಿರದೆ ಎರಡು ಕುಟುಂಬಗಳ ಮತ್ತು ಸಮಾಜದ ನಡುವಣ ಬಾಂಧವ್ಯದ ಬೆಸುಗೆಯಾಗಿರುತ್ತದೆ.

ಸಪ್ತಪದಿಯ ಕೊನೆಯ ಹೆಜ್ಜೆಯ ಮಂತ್ರ 'ಸಖಾ ಸಪ್ತಪದೀ!' ಅಂದರೆ ಅನ್ಯೋನ್ಯವಾಗಿ ಪ್ರೀತಿ-ವಿಶ್ವಾಸದಿಂದ ಸ್ನೇಹಿತರಂತೆ ಇರುತ್ತೇವೆ ಎಂದು ವಧೂ-ವರರು ಪರಸ್ಪರರಿಗೆ ಕೊಡುವ ಭಾಷೆ (promise). ಆದರೆ ಈಗ ಏನಾಗಿದೆ? ಮದುವೆಯಾದ ಮೂರು ತಿಂಗಳಿಗೇ ವಿವಾಹವಿಚ್ಛೇದನ! ಒಂದು ಕಾಲದಲ್ಲಿ 'ಉದ್ಯಾನನಗರೀ' ಎನಿಸಿಕೊಂಡಿದ್ದ ಬೆಂಗಳೂರು ಈಗ 'ಡೈವೋರ್ಸ್‌ನಗರೀ' ಆಗಿದೆ! ತಮ್ಮ ಮಗ/ಮಗಳು ಸಾಫ್ಟ್‌ವೇರ್ ಎಂಜಿನಿಯರಾಗಿ ಅಮೇರಿಕೆಯಲ್ಲಿದ್ದಾರೆಂದು ಹೆಮ್ಮೆಯಿಂದ ಹೇಳಿಕೊಳ್ಳುವ ತಂದೆ-ತಾಯಿಗಳಿಂದ ಇದನ್ನು ತಪ್ಪಿಸಲು ಸಾಧ್ಯವಾಗುತ್ತಿಲ್ಲವೇಕೆ? ಅನೇಕ ತಂದೆ-ತಾಯಿಗಳು ತಮ್ಮ ಮಗನ/ಮಗಳ ತಪ್ಪು ಇದೆಯೆಂದು ಕಂಡುಬಂದರೂ ಫೀಜಿಗಾಗಿ ಕೊಲೆಗಾರನಾದ ಕಕ್ಷಿದಾರನ ಪರ ವಹಿಸುವ ವಕೀಲರಂತೆ ವರ್ತಿಸುತ್ತಾರೆ. ಮದುವೆ ಮಂಟಪದಲ್ಲಿ ಅಕ್ಕಿಕಾಳು ಹಾಕಿ ಆಶೀರ್ವದಿಸಿದವರೇ ಶತ್ರುಗಳಂತೆ ಹರಿಹಾಯುತ್ತಾರೆ. ಆದಕಾರಣ ಸಪ್ತಪದಿಯ ಮಂತ್ರಕ್ಕೆ ಇರುವ ತಾತ್ವಿಕ ಅರ್ಥ ಕಳೆದುಹೋಗಿ ಈಗ ಅದೊಂದು ಶುಷ್ಕಸಂಪ್ರದಾಯವೆನಿಸಿದೆ.

ಕೌಟುಂಬಿಕ ಜೀವನದಲ್ಲಿ ಭಿನ್ನಾಭಿಪ್ರಾಯಗಳು ಬರುವುದು ಸಹಜ. ಆ ಕಾರಣಕ್ಕೆ ಸಣ್ಣ ಪುಟ್ಟ ಕಲಹಗಳು ತಲೆದೋರಬಹುದು. ಅವುಗಳನ್ನು ನಿವಾರಿಸಲು ಪರಸ್ಪರರಲ್ಲಿ ಪ್ರೀತಿ ಮತ್ತು ಹೊಂದಾಣಿಕೆ ಬಹಳ ಮುಖ್ಯ. ಒಂದು ಒಳ್ಳೆಯ ಸಿನೆಮಾ ಹೊಸದಾಗಿ ಬಂದಿದೆ ಎಂದಿಟ್ಟುಕೊಳ್ಳಿ. ಅಪರೂಪಕ್ಕೊಂಬಂತೆ ಸರ್ಕಸ್ ಸಹ ಬಂದಿದೆ. ಗಂಡ ಹೇಳುತ್ತಾನೆ 'ಸಿನೆಮಾಕ್ಕೆ ಹೋಗೋಣ'. ಹೆಂಡತಿ ಹೇಳುತ್ತಾಳೆ 'ಸರ್ಕಸ್‌ಗೆ ಹೋಗೋಣ'. ಸರಿ, ಘರ್ಷಣೆ

ಶುರುವಾಗುತ್ತದೆ. ಹಾಗೆ ಮಾಡದೆ 'ಈ ಭಾನುವಾರ ನೀನು ಹೇಳಿದಂತೆ ಆಗಲಿ, ಸರ್ಕಸ್‌ಗೆ ಹೋಗೋಣ; ಮುಂದಿನ ಭಾನುವಾರ ನಾನು ಹೇಳಿದಂತೆ ಸಿನೆಮಾಕ್ಕೆ ಹೋಗೋಣ!' ಎಂದು ಗಂಡ ಹೇಳಿದರೆ ಹೆಂಡತಿ ಸಂತೊಷದಿಂದ ಒಪ್ಪುತ್ತಾಳೆ. ಆದರೆ ಹಾಗೆ ಹೇಳಲು ಗಂಡನ 'ego' ಬಿಡುವುದಿಲ್ಲ. 'ಹೋಗೊದಾದ್ರೆ ಸಿನೆಮಾಕ್ಕೆ ಹೋಗೋಣ ಇಲ್ಲದಿದ್ದರೆ ಏನೂ ಬೇಡ' ಎನ್ನುತ್ತಾನೆ ಗಂಡ. ಅದನ್ನು ಒಪ್ಪಲು ಹೆಂಡತಿಯ 'ego' ಬಿಡುವುದಿಲ್ಲ. 'ಸಿನೆಮಾನೂ ಬೇಡ, ಸರ್ಕಸ್ಸೂ ಬೇಡ, ಯಾವುದೂ ಬೇಡ' ಎಂದು ಆಕೆ ಮುಖ ಸಿಂಡರಿಸಿಕೊಳ್ಳುತ್ತಾಳೆ. 'ತಥ್, ನಿಂದು ಯಾವಾಗ್ಲೂ ಇದೇ ರಗಳೆ ನೋಡು, ಏನೂ ಬೇಡ ಅಂದರೆ ಬೇಡ ಬಿಡು, ನನಗೇನಂತೆ, ಖರ್ಚಾಗೋ ದುಡ್ಡು ಉಳೀತು!' ಎಂದು ಗಂಡ ಹಂಗಿಸಿ ಮಾತನಾಡುತ್ತಾನೆ. ಇಂತಹ ಸಣ್ಣಪುಟ್ಟ ಘಟನೆಗಳೇ ಮುಂದೆ ದೊಡ್ಡವಾಗಿ ಸಂಸಾರದಲ್ಲಿ ದೊಡ್ಡ ಬಿರುಕು ಕಾಣಿಸಿಕೊಳ್ಳುತ್ತದೆ.

ಯುವ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಆರ್ಥಿಕವಾಗಿ ಸ್ವಾವಲಂಬಿಗಳು. ಅಮೇರಿಕೆಯಲ್ಲಿ ನೆಲೆಸಿದ ಅನೇಕ ಯುವದಂಪತಿಗಳ ಒಡನಾಟದಿಂದ ನಮಗೆ ತಿಳಿದುಬಂದ ಸಂಗತಿಯೆಂದರೆ: ಅವರ ಸಾಂಸಾರಿಕ ಬದುಕಿನಲ್ಲಿ ಭಿನ್ನಾಭಿಪ್ರಾಯಗಳ ಬೀಜ ಮೊಳೆಯಲು ಅವರು ಹತ್ತಿರದ ಬಂಧುಗಳಿಗೆ ಆರ್ಥಿಕ ನೆರವು ನೀಡುವ ಸಂದರ್ಭಗಳೂ ಇತ್ತೀಚೆಗೆ ಕಾರಣವಾಗುತ್ತಿವೆ. ತನ್ನನ್ನು ಬೆಳೆಸಿ, ಒಳ್ಳೆಯ ವಿದ್ಯೆಯನ್ನು ಕೊಡಿಸಿ ಮೇಲೆ ತಂದ ತಂದೆ ತಾಯಿಗಳಿಗೆ, ಅಣ್ಣ ತಮ್ಮಂದಿರಿಗೆ ಅಗತ್ಯವಿದ್ದಾಗ ಆರ್ಥಿಕ ನೆರವು ನೀಡಿ ಕೈಹಿಡಿಯುವುದು ಗಂಡನಿಗಾಗಲೀ, ಹೆಂಡತಿಗಾಗಲೀ ಅಗತ್ಯ ಎಂಬುದನ್ನು ಇಬ್ಬರೂ ಅರಿತುಕೊಳ್ಳಬೇಕು. ಗಂಡನು ಅಂತಹ ನೆರವನ್ನು ನೀಡಿದಾಗ ಹೆಂಡತಿಯು ಸ್ವಾರ್ಥಿಯಾಗದೆ ಅದನ್ನು ತನ್ನ ಮುಖದ ನೇರಕ್ಕೆ ನೋಡಿ ಅಸಹನೆಪಟ್ಟುಕೊಳ್ಳಬಾರದು. ಗಂಡನು ತನ್ನ ಕರ್ತವ್ಯವನ್ನು ಮಾಡಿದ್ದಾನೆ ಎಂದು ಪರಿಭಾವಿಸಬೇಕು. ಅದೇ ರೀತಿ ಹೆಂಡತಿಯು ತನ್ನ ತವರಿನವರಿಗೆ ಆರ್ಥಿಕ ಸಹಾಯ ನೀಡಿದಾಗ ಗಂಡನೂ ಸಹ ಅಸಹನೆಪಡದೆ, ಅದು ಆಕೆಯ ಕರ್ತವ್ಯವಾಗಿತ್ತು ಎಂದು ಪರಿಭಾವಿಸಬೇಕು.

ಇಂಥ ಭಾವನೆಯನ್ನು ಬೆಳೆಸಿಕೊಳ್ಳುವುದು ಹೇಳಿದಷ್ಟು ಸುಲಭವಲ್ಲವಾದರೂ ಪ್ರಯತ್ನವನ್ನು ತಪ್ಪದೇ ಮಾಡಬೇಕು. ಸತಿ-ಪತಿಗಳ ನಡುವಿನ ಸಂಬಂಧವೆಂದರೆ ಎರಡು ನದಿಗಳು ಸೇರಿ ಹರಿದಂತೆ. ಸೇರುವ ಮೊದಲು ತುಂಗೆ ಬೇರೆ, ಭದ್ರೆ ಬೇರೆ. ಎರಡೂ ಬೆರೆತು ಹರಿದಾಗ ಯಾವುದು ತುಂಗೆ, ಯಾವುದು ಭದ್ರೆ! ಅಲ್ಲಿ ತುಂಗೆಯೂ ಇಲ್ಲ, ಭದ್ರೆಯೂ ಇಲ್ಲ; ಅಲ್ಲಿರುವುದು ತುಂಗಭದ್ರೆ ಮಾತ್ರ! ನಮ್ಮ ಸಾಫ್ಟ್‌ವೇರ್ ಯುವದಂಪತಿಗಳು ಈ ಕೆಳಗಿನ ಮಾತನ್ನು ನೆನಪಿಟ್ಟುಕೊಂಡು ಅದರಂತೆ ನಡೆದರೆ ಅವರ ಸಂಸಾರ ಸುಖದ ಆಗರವಾಗುತ್ತದೆ:

If you are wrong, you must accept it,
If you are right, you must keep your mouth shut!

**(ಒಪ್ಪಿಕೋ, ನಿನ್ನದು ತಪ್ಪಾಗಿದ್ದರೆ,**
**ತೆಪ್ಪಗಿರು, ನಿನ್ನದೇ ಸರಿಯಾಗಿದ್ದರೆ!)**

**19.4.2012**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑